ಮೀನು ತಿಂದು ಆಗಲೇ ಕೆಂಪಾಗ್ತಾ ಇದ್ದೀರಿ. ದೇವು ಅಂತೂ ಟುಣ್ ಟುಣ್ ಆಗಿದ್ದಾನೆ... ಅಲ್ವೆ?"

ಎಲ್ಲ ಗೊಳ್ಳನೆ ನಕ್ಕರು. ಮರಳಿನ ಮೇಲೆ ಕಾಲೆಳೆಯುತ್ತಾ ಬರುತ್ತಿದ್ದ ದೇವರಾಜ ಮಾತ್ರ ನಗದೆ ಬೇರೇನೋ ಯೋಚಿಸುತ್ತಿದ್ದ. ದೊಡ್ಡ ಅಲೆಯೊಂದು ಪಾದದ ಮೇಲೆ ಹೊರಳಿ ಮರಳಿದಾಗ ಅವನಿಗೆ ಮೈ ಝುಂ ಅನ್ನಿಸಿತು.

ದೇವರಾಜನ ಮನಸ್ಸು ಎಲ್ಲ ನಾಳೆಗಳಲ್ಲೂ ಮುದುಡುತ್ತಲೇ ಹೋಯಿತು. ಬಯಲುಸೀಮೆಯಂತೆ ಎಲ್ಲವೂ ತೆರೆದಿದ್ದರೆ ಆತ ತಕ್ಷಣ ಓದಿಕೊಳ್ಳುತ್ತಿದ್ದ. ಮಲೆನಾಡು ಎಷ್ಟು ಸುಂದರವೋ ಅಷ್ಟೂ ನಿಗೂಢ. ಸೂರ್ಯನನ್ನು ವಾರಗಟ್ಟಲೆ ನೋಡದೆ ಅವನಿಗೆ ಬೇಸರವೇ ಆಯಿತು. ತನ್ನ ಹೈಸ್ಕೂಲಿನಿಂದ ಉರಿಯುವ ಬಿಸಿಲಿನಲ್ಲಿ ನಡೆಯುತ್ತಾ ತಲೆಯ ಮೇಲೆ ಪುಸ್ತಕದ ಬ್ಯಾಗು ಇಟ್ಟು ಕುರುಕ್ಷೇತ್ರದ ಹಾಡು ಹೇಳುತ್ತಾ ಮನೆ ತಲುಪುತ್ತಿದ್ದ. ಇಲ್ಲಿ ಸೂರ್ಯನನ್ನು ಬಯಸಿ ಬಯಸಿ ನೋಡಬೇಕು. ಅದೇನು ಭಾಷೆಯೋ! ಕಸ್ಲೆ ಪಿಸ್ಲೆ ಅಂತ ಮಾತನಾಡಿ ಜೀವ ತಿಂತಾರೆ. ಈರುಳ್ಳಿ ಆಲೂಗೆಡ್ಡೆ ಅಂದರೂ ತರಕಾರಿ ಮಾರುವ ಹೆಂಗಸಿಗೆ ಅರ್ಥವಾಗುವುದಿಲ್ಲ. ಯಾವಾಗಲೂ ಮುಸ್ಸಂಜೆಯಾಗಿದ್ದಂತೆಯೇ ಅನ್ನಿಸ್ತದೆ. ಈ ಸಮುದ್ರವೋ ಸದಾ ಭುಸುಗುಡುಗುತ್ತಲೇ ಇದೆ. ಅದರ ಅಬ್ಬರಕ್ಕೆ ಹೊಂದಿಕೊಳ್ಳಲು ಆಗ್ತಾ ಇಲ್ಲ. ಮೊನ್ನೆ ಪಾಲಿಟೆಕ್ನಿಕ್ ಕಾಲೇಜಿನ ಕಾಂಪೌಂಡಿನ ಒಳಗಿನವರೆಗೆ ನೀರು ನುಗ್ಗಿತ್ತಂತೆ. ನಮ್ಮೂರಲ್ಲಿ ಕುಡಿಯೋಕೆ ತೊಳೆಯೋಕೆ ನೀರಿಲ್ಲ. ಇರೋ ಒಂದು ಬೋರ್‌ವೆಲ್‌ನ್ನು ಊರ ಹೆಂಗಸರೆಲ್ಲಾ ಒತ್ತಿ ಒತ್ತಿ ಹಿಡಿ ಮುರಿದು ಹಾಕಿದ್ರು. ಮನೆ ಕಟ್ಟಿಸುವವರು ಎತ್ತು ಗಾಡಿ ಕಟ್ಟಿಕೊಂಡು ಮಳೆಕೂನಿ ಹಳ್ಳಕ್ಕೆ ಕೋಳಿ ಕೂಗುವ ಮುಂಚೆಯೇ ಹೋಗಿ ಸಣ್ಣ ಮರಳು ಬಾಚುತ್ತಿದ್ದರು. ಅದಕ್ಕಾಗಿ ಜಗಳವೂ ಆಗುತ್ತಿತ್ತು. ಬೆಳ್ಳೂರ ಕಲೀಮುಲ್ಲಾ ಕೂಚಳ್ಳಿ ತೊರೆಯಿಂದ ಸಣ್ಣ ಮರಳ ಹೇರುವ ಗುತ್ತಿಗೆ ತಗೊಂಡಿದ್ದ. ದೇವರಾಜನಿಗೆ ಕಾರವಾರದ ಕಡಲತೀರದ ಸಣ್ಣ ಮರಳ ದೊಡ್ಡ ರಾಶಿಯನ್ನು ಕಂಡಾಗ ಇದನ್ನು ಇಲ್ಲಿ ಕೇಳೋರೆ ದಿಕ್ಕಿಲ್ಲ ಅಂತ ಲೊಚಗುಟ್ಟಿಕೊಂಡ. ಇಂದು ಸಂಜೆ ತಾನೊಬ್ಬನೇ ಬೀಚ್‌ಗೆ ಬಂದಿದ್ದ. ದಡದಲ್ಲಿ ನಿಂತಿದ್ದ, ಉಪಯೋಗಿಸದಿದ್ದ ಮುರುಕು ದೋಣಿಯ ಮೇಲೆ ಕುಳಿತು ಗಲ್ಲಕ್ಕೆ ಕೈಕೊಟ್ಟ.

ಅತ್ತಲಿಂದ ಉಷೆ ಬರುತ್ತಿದ್ದಳು. ಸಪ್ಪಗಿದ್ದಳು. ಬಂದು ಸುಮ್ಮನೆ ಕತ್ತು ಬಗ್ಗಿಸಿ ನಿಂತಳು. ದೇವರಾಜ "ನೀವು ಕಾಲೇಜಿಗೆ ಹೋಗಿಲ್ಲವಾ?" ಎಂದ. "ನೀವು ಗೀವು ಏನೂ ಬೇಡ. ನೀನು ಅಂದರೆ ಸಾಕಲ್ಲಾ..." ದೇವರಾಜು ಸುಮ್ಮನಾದ. "ನನ್ನ ಮೇಲೆ ಸಿಟ್ಟುಂಟಾ?" ಅಂತ ಪೆಚ್ಚಾಗಿ ಕೇಳಿದಳು. ದೇವರಾಜ ಸಮುದ್ರದ ಕಡೆಗೆ ನೋಡುತ್ತಾ ಕುಳಿತುಬಿಟ್ಟ. ಸ್ವಲ್ಪ ಹೊತ್ತು ಸುಮ್ಮನಿದ್ದು 'ನಿಮ್ಮೂರು ಚೆಂದಾಗಿಲ್ಲ. ನಾನು ಕಾಲೇಜುಬಿಟ್ಟು ನಮ್ಮೂರಿಗೆ ವೋಯ್ತಿನಿ' ಅಂದ. ನಿಜವಾಗಿಯೂ ಉಷಾಗೆ ಅಳು ಬಂದಿತ್ತು. "ಗೊತ್ತು... ಗೊತ್ತು... ನಾನು ಕೆನ್ನೆಗೆ ಹೊಡೆದಿದ್ದನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗುತ್ತಿದ್ದಿಯಲ್ಲ... 'ಸಾರಿ' ಕೇಳಿದರೂ ಕೊರಗು ಹೋಗಲಿಲ್ಲವಾ?" ಎಂದವಳು ಕಣ್ಣಿಂದ ತುಂಬಿ ಕೆನ್ನೆಯ ಮೇಲೆ ಇಳಿಯುತ್ತಿದ್ದ ನೀರನ್ನು ಒರೆಸಿಕೊಳ್ಳದೆ ಆವೇಶದಿಂದ ದೇವರಾಜನ ಎರಡೂ ಕೈಗಳನ್ನು ಎತ್ತಿಕೊಂಡು ತನ್ನೆರಡು ಕೈಗಳಿಂದ ಪಟಪಟನೆ ತನ್ನ ಕೆನ್ನೆಗೆ ತಾನೇ ಬಾರಿಸಿಕೊಂಡಳು. ಕೆನ್ನೆಗೆ ಹೊಡೆದ ಕೈಗಳು ದೇವರಾಜನವೇ ಆಗಿದ್ದರೂ ಬಲ ಪ್ರಯೋಗ ಉಷಾಳದೇ ಆಗಿತ್ತು. ದೇವರಾಜನ ಬೆರಳುಗಳಿಗೆ ಅವಳ ಕಣ್ಣೀರು ಅಂಟಿಕೊಂಡಿತು.